# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 255/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀಕಂಠ | ಪಿಡಬ್ಲ್ಯೂ ಃ 2 |
| ತಂದೆಯ / ಗಂಡನ ಹೆಸರು | : ಲೇಃ ಚಿಕ್ಕರಾಚಶೆಟ್ಟಿ | ಪಿಡಬ್ಲ್ಯೂ ಃ 2 |
| ವಯಸ್ಸು | : 30 ವರ್ಷ | |
| ಉದ್ಯೋಗ | : ಕೂಲಿ ಕೆಲಸ | |
| ವಾಸಸ್ಥಳ | : ಹುಣಸನಾಳು ಗ್ರಾಮ, ನಂಜನಗೂಡು ತಾಲ್ಲೂಕು | |

**ಸಾಕ್ಷಿಯನ್ನು ಈ ದಿನ ದಿಃ 19.04.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾ,ಸಾ. 8 ನನ್ನ ತಾಯಿ. ಚಾ,ಸಾ. 10 ನನ್ನ ತಮ್ಮ. ಮೃತ ಚಿಕ್ಕರಾಚಶೆಟ್ಟಿ ನನ್ನ ತಂದೆ.

2. ನನ್ನ ತಂದೆಗೆ ಎರಡು ಮದುವೆಯಾಗಿತ್ತು. ನನ್ನ ತಾಯಿ ಅವರ 2 ನೇ ಹೆಂಡತಿ . ಮೊದಲನೇ ಹೆಂಡತಿ ಈ ಪ್ರಕರಣದ 1 ನೇ ಆರೋಪಿ . ಮೊದಲನೇ ಹೆಂಡತಿಗೆ 6 ಜನ ಮಕ್ಕಳಿದ್ದರು. ಅವರುಗಳು ರಾಜು, ಶಿವನಾಗ , ಮಹೇಶ , ರತ್ನಮ್ಮ , ಲಕ್ಷ್ಮೀ , ಜಯಲಕ್ಷ್ಮೀ. ನಾವು ಇಬ್ಬರು ಮಕ್ಕಳು. ಅಂದರೆ ನಾನು ಮತ್ತು ಚಾ,ಸಾ. 10.

3. ನನ್ನ ತಂದೆಗೆ ಅವರ ಹೆಸರಿನಲ್ಲಿ ಹುಣಸನಾಳು ಗ್ರಾಮದಲ್ಲಿ ಒಟ್ಟು 7 ಏಕೆರ ಜಮೀನು ಇತ್ತು. ಅದು ಅವರ ಸ್ವಯಾರ್ಜಿತ ಸ್ವತ್ತು ಎಂದು ನನ್ನ ತಂದೆ ಹೇಳುತ್ತಿದ್ದರು. ನನ್ನ

ತಂದೆಯ ಮೊದಲನೇ ಹೆಂಡತಿ ಬಸಮ್ಮ ಅಂದರೆ 2 ನೇ ಆರೋಪಿಯ ಹೆಸರಿನಲ್ಲಿ 6 ಎಕರೆ ಜಮೀನು ಇತ್ತು. ಆ ಜಮೀನನ್ನು ನಮ್ಮ ತಂದೆಯೇ ಆಕೆಗೆ ತೆಗೆದುಕೊಟ್ಟಿದ್ದರು.

4. ನಾವೆಲ್ಲರೂ ಬೇರೆ ಬೇರೆ ವಾಸ ಮಾಡುತ್ತಿದ್ದೆವು. ನಮ್ಮ ತಂದೆ ನಮ್ಮ ಜೊತೆಯಲ್ಲಿದ್ದರು.

5. ರಾಜುನ ಮತ್ತು ನನ್ನ ತಂದೆಯ ನಡುವೆ ಜಮೀನು ಮತ್ತು ಕೇಸಿಗೆ ಸಂಬಂಧಪ್ಪಂತೆ ಸಣ್ಣ ಪುಟ್ಟ ಗಲಾಟೆಗಳು ನಡೆಯುತ್ತಿದ್ದವು. ನನ್ನ ತಂದೆ ಸಿವಿಲ್ ಕೇಸನ್ನು ರಾಜು, ಶಿವನಾಗ ಅಂದರೆ 1 ನೇ ಆರೋಪಿಯ ವಿರುದ್ದ ಹಾಕಿದ್ದರು. ಅದು ನಂಜನಗೂಡಿನ ಕೋರ್ಟ ನಲ್ಲಿ ನಡೆಯುತ್ತಿತ್ತು. ಆ ಸಿವಿಲ್ ದಾವೆ ನನ್ನ ತಂದೆಯ ಪರವಾಗಿ ಆಗಿತ್ತು. ಅದರ ವಿರುದ್ಧ ಅಪೀಲನ್ನು ಸಲ್ಲಿಸಿದ್ದರು. ಆಗಲೂ ಸಹ ಅಪೀಲ್ಲಿ ನನ್ನ ತಂದೆಯ ಪರವಾಗಿಯೇ ತೀರ್ಪು ಆಗಿತ್ತು. ನಂತರ ಉಚ್ಚ ನ್ಯಾಯಾಯಾಲಯದಲ್ಲಿ ಅಪೀಲನ್ನು ಹುಡಿದ್ದರು. ಅಲ್ಲಿಯೂ ಸಹ ತೀರ್ಪು ನನ್ನ ತಂದೆಯ ಪರವಾಗಿಯೇ ಆಗಿತ್ತು.

6. ನನ್ನ ತಂದೆ 2021 - 22 ನೇ ಸಾಲಿನಲ್ಲಿ 3 ಏಕರೆ ಜಮೀನನ್ನು ಮಾರಾಟ ಮಾಡಿದ್ದರು. ಅವರ ಆರೋಗ್ಯ ಸರಿ ಇರಲಿಲ್ಲ. ಮಕ್ಕಳ ಯಾರೂ ನನ್ನನ್ನು ನೋಡಿಕೊಳ್ಳುತ್ತಿಲ್ಲ ಎಂದು ಜಮೀನನ್ನು ಮಾರಾಗಿ ಮಾಡಿದ್ದರು.

7. 2017 ರಲ್ಲಿ ನನ್ನ ತಂದೆ ನನ್ನ ತಾಯಿಯ ಊರಾದ ಗುಂಡ್ಲುಪೇಟೆಯ ಹುಲ್ಲೇಪುರ ಗ್ರಾಮಕ್ಕೆ ಹೋದೆವು . ನಾನು ಹಣಸಾಳು ಗ್ರಾಮದಲ್ಲಿ ವಾಸ ಮಾಡುತ್ತಿದ್ದೆ.

8. ದಿಃ 01.06.2023 ರಂದು ನಾನು ಬೆಳಿಗ್ಗೆ 09.30 ರಿಂದ 10.00 ಗಂಟೆಯ ಸಮಯಕ್ಕೆ ಜಮೀನಿನ ಕೆಲಸಕ್ಕೆ ಹೋದೆ. ಟೋಮೇಟೋ ಕೀಳಿಸುತ್ತಿದ್ದೆ , ಕೂಲಿ ಆಳುಗಳು ಬಂದಿದ್ದರು. ನನ್ನ ಹೆಂಡತಿ ಡೆಲಿವರಿಗಾಗಿ ತಾಯಿಯ ಮನೆಗೆ ಹೋಗಿದ್ದಳು. ಹೀಗಾಗಿ

ನನ್ನ ಮನೆಯಲ್ಲಿ ನಾನು ಒಬ್ಬನೇ ವಾಸ ಮಾಡುತ್ತಿದ್ದೆ. ಮಧ್ಯಾಹ್ನ 02.30 ರ ಸಮಯಕ್ಕೆ ನನ್ನ ತಾಯಿ ನನಗೆ ಫೋನ್ ಮಾಡಿ, ನಿಮ್ಮ ತಂದೆ ಸರ್ವೆ ಮಾಡಿಸುವ ಸಲುವಾಗಿ ಜಮೀನಿನ ಹತ್ತಿರ ಬಂದಿದ್ದರು , ಏನಾಗಿದೆ ಏನಾಗುತ್ತಿದೆ ಹೋಗಿ ನೋಡು ಎಂದು ಹೇಳಿದರು. ಸರ್ವೆ ಮನೆಯ ಹತ್ತಿರ ಊರಿನಲ್ಲಿ ನಿವೇಶನದ ಬಳಿಯಲ್ಲಿ ನಡೆಯುತ್ತಿತ್ತು. ನನ್ನ ತಾಯಿ ಫೋನ್ ಮಾಡಿದ ತಕ್ಷಣ ನನಗೆ ಹೋಗಲು ಆಗಲಿಲ್ಲ , ಏಕೆಂದರೆ ಕೂಲಿ ಆಳುಗಳು ಟಿಮೋಟೋ ಕೀಳುತ್ತಿದ್ದರು , ಹೀಗಾಗಿ ನಾನು ಮನೆಯ ಹತ್ತಿರ ಹೋದಾಗ ಸಂಜೆ 04.00 ರಿಂದ 04.30 ಆಗಿತ್ತು. ನನ್ನ ಮನೆಯ ಹತ್ತಿರ ಹೋದಾಗ ಅಲ್ಲಿ ಯಾರಾ ಇರಲಿಲ್ಲ ನಾನು ಹಾಕಿದ್ದ ಬೀಗವನ್ನು ಒಡೆದು ಹಾಕಿದರು. ಮುಂದಿನ ಬಾಗಿಲಿಗೆ ವೈರನ್ನು ಮೇಲಿನ ಗಳಕ್ಕೆ ಕಟ್ಟಿ ದ್ದರು. ಅದು ಗುಡಿಸಲು. ನಾನು ಅದನ್ನು ಬಿಚ್ಚಿ ಒಳಕ್ಕೆ ಹೋದೆ. ಅಲ್ಲಿ ನನ್ನ ತಂದೆಯ ಶವ ಬಿದ್ದಿತ್ತು. ಅವರ ತಲೆ , ಮುಖವನ್ನು ಚೆಚ್ಚಿ ಹಾಕಿದ್ದರು. ನನಗೆ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಗಾಬರಿಗೊಂಡೆ. ನಂತರ ನಾನು ನನ್ನ ಹೆಡಂತಿಯ ಮನೆಗೆ ಹೋದೆ. ಆಕೆಯ ಮನೆ ನಂಜನಗೂಡಿನ ಚಾಮಲಾಪುರದಲ್ಲಿ ಇದೆ. ನನಗೂ ಏನಾದರು ಮಾಡಬಹುದೋ ಏನೋ ಎಂದು ಭಯಗೊಂಡು ನಾನು ಹೆಂಡತಿಯ ಮನೆಗೆ ಹೊಾದೆ.

9. ನಂತರ ನನ್ನ ತಮ್ಮ ಶಿವುಗೆ ನಾನು ಫೋನ್ ಮಾಡಿ ಹಳಿದೆ. ಅವನು ಬೆಂಗಳೂರಿನಲ್ಲಿ ಕೆಸಲ ಮಾಡುತ್ತಿದ್ದ. ಅದೇ ದಿನ ಆತ ಹುಲ್ಲೇಪುರ ಗ್ರಾಮಕ್ಕೆ ಬಂದ. ಮರು ದಿನ ಬೆಳಿಗ್ಗೆ ನಾನು , ನನ್ನ ತಾಯಿ ಮತ್ತು ನನ್ನ ತಮ್ಮ ನಂಜನಗೂಡು ಪೋಲೀಸಿ ಠಾಣೆಗೆ ಹೋದೆವು. ನಂತರ ನನ್ನ ತಂದೆಯ ಶವವನ್ನು ಇರಿಸಿದ್ದ ಕೆ ಆರ್ ಆಸ್ಪತ್ರೆಗೆ ಹೋದೆವು. ಅಲ್ಲಿ

ಶವ ಮಹಜರ್ ಮಾಡಿ ಮಧ್ಯಾಹ್ನ 03.30 ರಿಂದ 04.00 ಗಂಟೆಯ ಸಮಯಕ್ಕೆ ಶವವನ್ನು ಹಸಾತಂತರಿಸಿದ್ದರು.

10. ಹುಣಸನಾಳು ಗ್ರಾಮದ ಸಿದ್ದರಾಜು ಎನ್ನವವರು ಈ ಪ್ರಕರಣದಲ್ಲಿ ದೂರನ್ನು ನೀಡಿರುತ್ತಾರೆ.

11. ಶವವನ್ನು ಹುಲ್ಲೇಪುರ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅಂತ್ಯ ಸಂಸ್ಕಾರ ಮಅಾಡಿದೆ.

12. ರಾಜು ಮತ್ತು ಶಿವನಾಗ ನನ್ನ ತಂದೆಯ ಕೊಲೆ ಮಾಡಿರುತ್ತಾರೆ. ಹೈ ಕೋರ್ಟ ನಲ್ಲೂ ಸಹ ತೀರ್ಪು ನನ್ನ ತಂದೆಯ ಪರವಾಗಿ ಆಗಿದ್ದರಿಂದ , ಸರ್ವೆ ನ ಮಾಡಲು ಬಂದಾಗ ಗಲಾಟೆ ಆಗಿ ಅವರು ನನ್ನ ತಂದೆಯ ಕೊಲೆ ಮಾಡಿರುತ್ತಾರೆ ಎಂದು ಅಂದು ಕೊಂಡಿದ್ದೆ . ನನ್ನ ತಂದೆಯನ್ನು ಇಂತಹವರೇ ಕೊಲೆ ಮಾಡಿರುತ್ತಾರೆ ಎಂದು ನನಗೆ ಬೇರೆ ಯಾರು ಸಹ ಮಾಹಿತಿ ನೀಡಿರುವುದಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

13. ದಿಃ 01.06.2023 ರಂದು ಮಧ್ಯಾಹ್ನ ಸುಮಾರು 12.30 ಗಂಟೆ ಸಮಯದಲ್ಲಿ ನನ್ನ ತಂದೆ ಹುಣಸನಾಳು ಗಾಮದ ಸೈಟನ್ನು ಅಳತೆ ಮಾಡಿಸುತ್ತಿದ್ದಾಗ ನನ್ನ ದಂೊಡ್ಡ ತಾಯಿ ಬಸಮ್ಮ ಮತ್ತು ಅವರ ಮಗ ಶಿವನಾಗ ಸೈಟನ್ನು ಅಳತೆ ಮಾಡದಂತೆ ಜಗಳ ಮಾಡಿ ಬೈದಿದ್ದು ಸುಮಾರು 03.00 ಗಂಟೆ ಮಯಲ್ಲಿ ನನ್ನ ತಂದೆಯನ್ನು ಬಸಮ್ಮ

ಮತ್ತು ಶಿವನಾಗ ನಾವು ವಾಸವಿರುವ ಶೆಡ್ಡು ಮನೆಗೆ ಎಳೆದುಕೊಂಡು ಹೋಗಿ ಆಸ್ತಿಯ ವಿಚಾರದಲ್ಲಿ ಗಳ ಮಾಡಿ ಶಿವನಾಗ ಮಚ್ಚಿನೀಂದ ನನ್ನ ತಂದೆಯ ತಲೆ ಹಾಗೂ ಮೈ ಕೈಗೆ ಹೊಗೆದು ರಕ್ತ ಗಾಯಗೊಳಿಸಿದ್ದು , ಬಸಮ್ಮ ರಿಪೀಸ್ ಪಟ್ಟಿಯಿಂದ ಮೈ ಕೈಗೆ ಹೊಡೆದು ರಕ್ತ ಗಾಯಗೊಳಿಸಿ ರುಂಡು ಕಲ್ಲನು್ನ ಮುಖದ ಮೇಲೆ ಗುದ್ದಿ ಕೊಲೆ ಮಾಡಿರುತ್ತಾರೆ ಎಂದು ಹುಣಸನಾಳು ಗ್ರಾಮದ ಮಾದಶೆಟ್ಟಿ ಮಗ ಸಿದ್ದಯ್ಯ ತಿಳಿಸಿದಂರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , ಅವರು ಈ ವಿಷಯನ್ನು ನನ್ನ ತಮ್ಮ ಶಿವ ಶೆಟ್ಟಿಗೆ ತಿಳಿಸಿರುತ್ತಾರೆ , ಎನ್ನುತ್ತಾರೆ.

14. ನಾನು ಪೋಲೀಸರ ಮುಂದೆ ಈಗ ಓದಿ ಹೇಳಿದಂತೆ, ಅಂದರೆ, "ನಂತರ ಸ್ಥಳದಲ್ಲಿ ರದ್ದ ಮಾದಶೆಟ್ಟಿ ಮಗ ......................... ಕೊಲೆ ಮಾಡಿರುತ್ತಾರೆ ಎಂದು ತಿಳಿಯಿತು" ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಭಾಗವನ್ನು ನಿಪಿ 9 ಎಂದು ಗುರುತುಪಡಿಸಿಕೊಳ್ಳಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

15. ನನ್ನ ತಂದೆ ಮೃತ ಪಡುವ 6 ವರ್ಷಗಳ ಮುಂಚೆ ನನ್ನ ಮದುವೆ ಆಗಿತ್ತು. ನಾನು 7 ನೇ ತರಗತಿ ವರೆಗೆ ಓದಿದ್ದೇನೆ. ಹುಣಸನಾಳು ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೆ. ನನ್ನ ಮದುವೆಗೂ ಮುಂಚೆ , ಚಿಕ್ಕವಯಸ್ಸಿನಿಂದ ನೂರಾರು ಬಾರಿ ನಂಜನಗೂಡಿಗೆ ಬಂದು ಹೋಗಿರುತ್ತೇನೆ ಎನ್ನುವುದು ಸರಿ. ಸಿವಿಲ್ ವ್ಯಾಜ್ಯ ಶುರುವಾದ ನಂತರ ನಾನು ಯಾವಾಗಲು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನನ್ನ ತಂದೆ ಹೋಗಿರುತ್ತಾರೆ. ಹುಣಸನಾಲಿನಿಂದ ಹುಲ್ಲೇಪುರಕ್ಕೆ ಹೋಗಲು ನಂಜನಗೂಡು ಮಾರ್ಗವಾಗಿಯೇ

ಹೋಗಬೇಕಾಗಿರುವುದಿಲ್ಲ. ನಂಜನಗೂಡಿನಲ್ಲಿ ತಾಲ್ಲೂಕು ಕಛೇರಿಯ ಪಕ್ಕದಲ್ಲಿರುವ ಪೋಲೀಸ್ ಠಾಣೆಯನ್ನು ನಾನು ಮೊದಲೇ ನೋಡಿದ್ದೆ ಎನ್ನುವುದು ಸರಿ ನಂಜುಂಡೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಇರುವ ನಂಜನಗೂಡು ನಗರ ಪೋಲೀಸ್ ಠಾಣೆಯನ್ನು ನಾನು ನೋಡಿರುವುದಿಲ್ಲ. ಚಾಮಲಾಪುರ ಹುಂಡಿಯಿಂದ ನಂಜನಗೂಡು ತಾಲ್ಲೂಕು ಕಛೇರಿಯ ಪಕ್ಕದಲ್ಲಿ ಇರುವ ಗ್ರಾಮಾಂತರ ಪೋಲೀಸ್ ಠಾಣೆಗೆ 2 ಕಿ.ಮಿ. ದೂರವಾಗುತ್ತದೆ. ನನ್ನ ಹೆಂಡತಿಯ ತವರು ಮನೆಯಲ್ಲಿ ಆಕೆಯ ತಂದೆ ತಾಯಿ , ಅಣ್ಣ ಅತ್ತಿಗೆ ಮತ್ತು ಅವರ ಮಕ್ಕಳು ವಾಸ ಮಾಡುತ್ತಾರೆ. ಹುಣಸನಾಳು ಗ್ರಾಮದಲ್ಲಿ ಸುಮಾರು 600 ಮನೆಗಳಿವೆ. ಹುಣಸನಾಳು ಗ್ರಾಮದಲ್ಲಿ ನಮ್ಮ ಸಂಬಂಧಿಕರನ್ನು ಹೊರತು ಪಡಿಸಿ ಉಳಿದವರೊಂದಿಗೆ ನಮ್ಮ ಸಂಬಂಧ ಅಷ್ಟೇನು ಚೆನ್ನಾಗಿರುವುದಿಲ್ಲ.

16. ನಾನು ನನ್ನ ಮನೆಯ ಒಳಗೆ ಇದ್ದಂತಹ ನನ್ನ ತಂದೆಯ ಶವವನ್ನು ನೋಡಿ ಹೊರ ಬಂದು ಹುಣಸನಾಳು ಗ್ರಾಮದ ಯಾರಿಗೂ ಸಹ ಮನೆಯಲ್ಲಿ ಈ ಕೃತ್ಯ ನಡೆದಿದೆ ಎಂದು ತಿಳಿಸಿರುವುದಿಲ್ಲ. ಹುಣಸನಾಳು ಗ್ರಾಮದಿಂದ ಬಸ್ಸಿನಲ್ಲಿ ನಂಜನಗೂಡಿಗೆ ಬಂದೆ. ಬಸ್ಸಿನಲ್ಲಿಯೂ ಸಹಯಾರಿಗೂ ಸಹ ನನ್ನ ಮನೆಯಲ್ಲಿ ಇಂತಹ ಅನಾಹುತ ಆಗಿರುತ್ತದೆಎಂದು ನಾನು ತಿಳಿಸಿರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಬಸ್ಸಿನಲ್ಲಿ ನನ್ನ ಪರಿಯಸ್ಥರು ಇರಲಿಲ್ಲ ಎಂದು. ಹುಲ್ಲಹಳ್ಳ ಸರ್ಕಲ್ ನಲ್ಲಿ ಇಳಿದೆ. ಅಲ್ಲಿಂದ ನಾನು ನನ್ನ ಹೆಂಡತಿಯ ಮನೆಯನ್ನು ತಲುಪಿದಾಗ ಸಂಜೆ 06.00 ಗಂಟೆ ಆಗಿತ್ತು. ಮನೆಯಲ್ಲಿ ನನ್ನ ಹೆಂಡತಿಯ ತಂದೆ ತಾಯಿ , ಆಕೆಯ ಅಣ್ಣ ಅತ್ತಿಗೆ ಇದ್ದರು. ಅವರಿಗೆ ನಾನು ಈ ವಿಷಯವನ್ನು ತಿಳಿಸಿದೆ. ಅವರನ್ನು ಕರೆದುಕೊಂಡು ನಾನು ಪೋಲೀಸ್ ಠಾಣೆಗೆ ಹೋಗುವ ಪ್ರಯತ್ನ ಮಾಡಲಿಲ್ಲ , ಏಕೆಂದರೆ ನನ್ನ ತಾಯಿ ಮತ್ತು ತಮ್ಮ ಬೆಳಿಗ್ಗೆ ಬರುತ್ತೇವೆ,

ಆಗಲೇ ದೂರನ್ನು ಕೊಡೋಣ ಎಂದು ತಿಳಿಸಿದ್ದರು. ಈ ವಿಷಯವನ್ನು ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ.

17. ಮರು ದಿನ ಬೆಳಿಗ್ಗೆ ಮೊದಲನೇ ಬಾರಿಗೆ ಪೋಲೀಸ್ ಠಾಣೆಗೆ ಹೋದಾಗ ಸಮಯ ಬೆಳಿಗ್ಗೆ 09.30 ರಿಂದ 10.00 ಗಂಟೆ ಆಗಿತ್ತು. ಠಾಣೆಯಲ್ಲಿ ಅರ್ಧ ಗಂಟೆ ಕಾಲ ಇದ್ದೆವು. ಆ ಸಂಧರ್ಬದಲ್ಲಿ ನಾನು ಪೊಲೀಸರ ಮುಂದೆ ಈಗ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ವಿಚಾರಗಳನ್ನು ತಿಳಿಸಿದೆ. ಅದನ್ನು ಪೋಲೀಸರು ಟೈಪ್ ಮಾಡಿಕೊಂಡರು.

18. ನಂತರ ನಮ್ಮನ್ನು ಶವ ಮಹಜರ್ ಗೆ ಕರೆದುಕೊಂಡು ಹೋದರು. ಮೈಸೂರು ತಲುಪಿದಾಗ ಸುಮಾರು 11.30 ರಿಂದ 12.00 ಗಂಟೆ ಆಗಿತ್ತು. ಅಲ್ಲಿ ಮಧ್ಯಾಹ್ನ 03.30 ರ ವರೆಗೆ ಇದ್ದೆವು. ಆ ಸಂದರ್ಭದಲ್ಲಿ ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆಗ ನನ್ನ ಹೇಳಿಕೆಯನ್ನು ಕೈ ಬರಹದಲ್ಲಿ ಬರೆದುಕೊಂಡರು.

19. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

20. ನಂತರದಲ್ಲಿ ಯಾವ ಹೇಳಿಕೆಯನ್ನು ಪೋಲೀಸರ ಮುಂದೆ ನೀಡಿರುವುದಿಲ್ಲ.

21. ನನ್ನ ತಂದೆಗೆ 7 ಏಕರೆ ಸ್ವಯಾರ್ಜಿತ ಜಮೀನು ಇತ್ತು ಎಂದು ಪೋಲೀಸರ ಮುಂದೆ ಹೇಳಿರುತ್ತೇನೆ. ಅದೇ ರೀತಿ 2 ನೇ ಆರೋಪಿ ಬಸಮ್ಮಳ ಹೆಸರಿಗೆ 6 ಏಕರೆ ಜಮೀನನ್ನು ನನ್ನ ತಂದೆ ಖರೀದಿ ಮಾಡಿ ಕೊಟ್ಟಿದ್ದರು ಎನ್ನುವ ವಿಷಯವನ್ನು ಸಹ ಪೋಲೀಸರ ಮುಂದೆ ಹೇಳಿರುತ್ತೇನೆ. ನನ್ನ ತಂದೆ ರಾಜು ಮತ್ತು ಶಿವನಾಗನ ವಿರುದ್ಧ ಸಿವಿಲ್ ದಾವೆಯನ್ನು ಹೊಡಿದ್ದರು ಎನ್ನುವ ವಿಷಯವನ್ನು ಸಹ ಪೋಲೀಸರ ಮುಂದೆ ಹೇಳಿರುತ್ತೇನೆ. 2021 – 22 ನೇ ಸಾಲಿನಲ್ಲಿ ನನ್ನ ತಂದೆ 3 ಏಕರೆ ಜಮೀನನ್ನು , ಮಕ್ಕಳು

ನನ್ನನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಎಂದು ಮಾರಾಟ ಮಾಡಿದ್ದರು ಎನ್ನುವ ವಿಷಯವನ್ನು ಸಹ ಪೋಲೀಸರ ಮುಂದೆ ಹೇಳಿರುತ್ತೇನೆ. 2017 ನೇ ಸಾಲಿನಿಂದ ನನ್ನ ತಂದೆ ನನ್ನ ತಾಯಿಯೊಂದಿಗೆ ಹುಲ್ಲೇಪುರ ಗ್ರಾಮದಲ್ಲಿ ವಾಸ ಮಾಡಲು ಪ್ರಾಂಭಸಿದ್ದರು ಎನ್ನುವ ವಿಷಯವನ್ನು ಸಹ ಪೋಲೀಸರ ಮುಂದೆ ಹೇಳಿರುತ್ತೇನೆ.

22. ದಿಃ 01.06.2023 ರಂದು ನಾನು ಬೆಳಿಗ್ಗೆ 09.30 ರಿಂದ 10.00 ಗಂಟೆಯ ಸಮಯಕ್ಕೆ ಜಮೀನಿನ ಕೆಲಸಕ್ಕೆ ಹೋದೆ. ಟೋಮೇಟೋ ಕೀಳಿಸುತ್ತಿದ್ದೆ , ಕೂಲಿ ಆಳುಗಳು ಬಂದಿದ್ದರು. ನನ್ನ ಹೆಂಡತಿ ಡೆಲಿವರಿಗಾಗಿ ತಾಯಿಯ ಮನೆಗೆ ಹೋಗಿದ್ದಳು. ಹೀಗಾಗಿ ನನ್ನ ಮನೆಯಲ್ಲಿ ನಾನು ಒಬ್ಬನೇ ವಾಸ ಮಾಡುತ್ತಿದ್ದೆ. ಮಧ್ಯಾಹ್ನ 02.30 ರ ಸಮಯಕ್ಕೆ ನನ್ನ ತಾಯಿ ನನಗೆ ಪೋನ್ ಮಾಡಿ, ನಿಮ್ಮ ತಂದೆ ಸರ್ವೆ ಮಾಡಿಸುವ ಸಲುವಾಗಿ ಜಮೀನಿನ ಹತ್ತಿರ ಬಂದಿದ್ದರು , ಏನಾಗಿದೆ ಏನಾಗುತ್ತಿದೆ ಹೋಗಿ ನೋಡು ಎಂದು ಹೇಳಿದರು. ಸರ್ವೆ ಮನೆಯ ಹತ್ತಿರ ಊರಿನಲ್ಲಿ ನಿವೇಶನದ ಬಳಿಯಲ್ಲಿ ನಡೆಯುತ್ತಿತ್ತು. ನನ್ನ ತಾಯಿ ಪೋನ್ ಮಾಡಿದ ತಕ್ಷಣ ನನಗೆ ಹೋಗಲು ಆಗಲಿಲ್ಲ , ಏಕೆಂದರೆ ಕೂಲಿ ಆಳುಗಳು ಟೆಮಾಟೋ ಕೀಳುತ್ತಿದ್ದರು , ಹೀಗಾಗಿ ನಾನು ಮನೆಯ ಹತ್ತಿರ ಹೋದಾಗ ಸಂಜೆ 04.00 ರಿಂದ 04.30 ಆಗಿತ್ತು. ನನ್ನ ಮನೆಯ ಹತ್ತಿರ ಹೋದಾಗ ಅಲ್ಲಿ ಯಾರಾ ಇರಲಿಲ್ಲ ನಾನು ಹಾಕಿದ್ದ ಬೀಗವನ್ನು ಒಡೆದು ಹಾಕಿದರು. ಮುಂದಿನ ಬಾಗಿಲಿಗೆ ವೈರನ್ನು ಮೇಲಿನ ಗಳಕ್ಕೆ ಕಟ್ಟಿ ದ್ದರು. ಅದು ಗುಡಿಸಲು. ನಾನು ಅದನ್ನು ಬಿಚ್ಚಿ ಒಳಕ್ಕೆ ಹೋದೆ. ಅಲ್ಲಿ ನನ್ನ ತಂದೆಯ ಶವ ಬಿದ್ದಿತ್ತು. ಅವರ ತಲೆ , ಮುಖವನ್ನು ಚೆಚ್ಚಿ ಹಾಕಿದ್ದರು. ನನಗೆ ಏನು ಮಾಡಬೇಕು ಎಂದು ಗೊತ್ತಾಗಲಿಲ್ಲ. ಗಾಬರಿಗೊಂಡೆ. ನಂತರ ನಾನು ನನ್ನ ಹೆಡಂತಿಯ ಮನೆಗೆ ಹೋದೆ. ಆಕೆಯ ಮನೆ ನಂಜನಗೂಡಿನ ಚಾಮಲಾಪುರದಲ್ಲಿ ಇದೆ. ನನಗೂ

ಏನಾದರು ಮಾಡಬಹುದೋ ಏನೋ ಎಂದು ಭಯಗೊಂಡು ನಾನು ಹೆಂಡತಿಯ ಮನೆಗೆ ಹೋದೆ ಎನ್ನುವ ವಿಷಯಗಳನ್ನು ನಾನು ಪೋಲೀಸರ ಮುಂದೆ ಹೇಳಿರುತ್ತೇನೆ.

23. ನಾನು ಪೋಲೀಸರ ಮುಂದೆ , ಸಿವಿಲ್ ದಾವೆಗಳು ನನ್ನ ತಂದೆಯ ಪರವಾಗಿ ಆಗಿದ್ದರಿಂದ, ಆರೋಪಿಗಳು ನನ್ನ ತಂದೆಯನ್ನು ಕೊಲೆ ಮಾಡಿರುತ್ತಾರೆ ಎಂದು ಪೋಲೀಸರ ಮುಂದೆ ತಿಳಿಸಿರುತ್ತೇನೆ.

24. ಚಾ,ಸಾ. 12 ರವರು ನನ್ನ ತಮ್ಮನಿಗೆ ವಿಷಯವನ್ನು ತಿಳಿಸಿದರು ಎಂದು ಪೋಲೀಸರ ಮುಂದೆ ಹೇಳಿರುವುದಿಲ್ಲ.

25. ಈ ಮೇಲ್ಕಂಡ ಯಾವುದೇ ವಿಷಯಗಳನ್ನು ನಾನು ಪೋಲೀಸರ ಮುಂದೆ ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ.

26. ನನ್ನ ತಂದೆಯ ಶವವನ್ನು ನೋಡಿದ ನಂತರ ಅವರನ್ನು ಮುಟ್ಟಿ ನೋಡುವ ಪ್ರಯತ್ನ ನಾನು ಮಾಡಲಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , ಶವವನ್ನು ನೋಡಿ ಗಾಬರಿಗೊಂಡು ಹೊರ ಬಂದೆ ಎಂದು. ಹೋಗುವಾಗ ಬಾಗಿಲನ್ನು ಮುಂದಕ್ಕೆ ಎಳೆದುಕೊಂಡು ಹೋಗಿದ್ದೆ. ನನ್ನ ತಂದೆಯ ಸಾವಿನ ಬಗ್ಗೆ ಹುಣಸನಾಳು ಗ್ರಾಮದವರು ದೂರನ್ನು ನೀಡಿರುತ್ತಾರೆ ಎನ್ನುವುದು ಸರಿ . ನನ್ನನ್ನು ಪೋಲೀಸರು ನಾನು ಎಲ್ಲಿ ಇದ್ದೇನೆ ಎಂದು ರಾತ್ರಿ ಎಲ್ಲಾ ಹುಡುಕಿರುತ್ತಾರೆ ಎನ್ನುವುದು ಸರಿಯಲ್ಲ. ಮರುದಿನದವರೆಗೂ ನಾನು ನನ್ನ ತಂದೆಯ ಸಾವನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದೆ ಎನ್ನುವುದು ಸರಿಯಲ್ಲ. ನನ್ನ ತಂದೆ ಮೃತ ಪಟ್ಟ 3 ದಿನಗಳವರೆಗೂ ನಾನು ಪೋಲೀಸರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ, ಮರು ದಿನ ಪೋಲೀಸ್ ಠಾಣೆಯಲ್ಲಿ ಮತ್ತು ಕೆ

ಆರ್ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

27. ನನ್ನ ತಂದೆ ನನ್ನ ತಾಯಿಯನ್ನು ಮದುವೆಯಾದಾಗಿನಿಂದಲೂ ಹುಲ್ಲೇಪುರ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ನನ್ನ ತಂದೆಯ ಸಾವಿಗೂ ಮತ್ತು ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ಮೇಲೆ ಆಪಾದನೆ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅದೇ ಕಾರಣಕ್ಕಾಗಿ ನನ್ನ ಮನೆಯ ಬೀಗವನ್ನು ಒಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**